Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 48] [ಶುಕ್ರವಾರ 28—11—47 [ಬಿಡಿ ಪ್ರತಿ 3 ಪೈ

ಗೋವಧೆ ನಿಂತೀತೇ?

ಯಾದವಾಡದಲ್ಲಿ ಕಾರ್ತೀಕ ಶುದ್ಧ ಪ್ರತಿಪದೆಯ ದಿವಸ ರಾಷ್ಟ್ರೀಯ ಸ್ತಂಭಕ್ಕೆ ಬೆಳ್ಳಿಯ ಕಳಸ ಕೂಡಿಸುವ ಮಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಂ ಂ

ಬೊಂಬಾಯಿ ಸರಕಾರವು ಆಹಾರ ಧಾನ್ಯಗಳ ಹಾಗೂ ಸಕ್ಕರೆ ಮೇಲಿನ ನಿಯಂತ್ರಣವನ್ನು ಡಿಸೆಂಬರು 1 ರಿಂದ ತೆಗೆದುಹಾಕುವ ಆಲೋಚನೆ ನಡೆಸಿರುವುದಾಗಿ ಸುದ್ದಿ.

ಂ ಂ

ಬೆಂಗಳೂರು ಸಿಟಿಯಲ್ಲಿ ನಮುನ್ನಾ ದಿವಸಗೂ ಮಂತಾಜಾರಭಕ್ಕರಿಗೂ ಕುಸಬಲ ಅಕ್ಕಿ ಒದಲು ಕೋಟಾದ ಮೂರನೇ ಒಂದು ಭಾಗ ಬೆಣತಕ್ಕಿ ಕೊಡಲಾಗುವುದೆಂದು ಪೈಸ್ ನೋಟು ತಿಳಿಸುತ್ತದೆ.

ಂ ಂ

ಮೈಸೂರು ಡಿ ॥ ಬೋರ್ಡಿನ ಎಕನಾಮಿಕ್ ಕಮಿಟಿ ಮೀಟಿಂಗು ಡಿಸೆಂಬರ್ 1 ನೇ ತಾರೀಖು 1 ಘಂಟೆಗೆ ನಡೆಯುವುದು.

ಂ ಂ

ನವದೆಹಲಿ ನ 25.... ಶಾಸನ ಸಭೆಯಲ್ಲಿ ಸೇಟ್ ಗೋವಿಂದಪಾಸರು ರೈಲ್ವೆಯ ಪ್ರಥಮ ತರಗತಿಯನ್ನು ವಜಾ ಮಾಡಬೇಕೆಂದರು.

ಂ ಂ

ಬೆಂಗಳೂರು ನ 26.... ಊರುಕೇರಿ ಸಾವಿಸಲು ಅಂಜ ತೆಗೆದುಕೊಂಡ ಒಬ್ಬ ಸ್ಪೆಷಲ್ ಮಾಸ್ಟರು ಸಸ್ಪೆಂಡು ಮಾಡಲ್ಪಟ್ಟಿದ್ದಾರೆ.

ನವದೆಹಲಿ ನ 26.... ಗೋವಧೆ ಸಂಬಂಧದ ಎಲ್ಲ ವಿಷಯ ಪರಿಶೀಲಿಸಿ ಈ ಸಂಪತ್ತನ್ನು ರಕ್ಷಿಸಲು ಮತ್ತು ಅಭಿವೃದ್ಧಿಗೊಳಿಸಲು ಸಲಹೆ ಕೊಡಲು ಒಂದು ಸಮಿತಿಯನ್ನು ನೇಮಿಸಲು ಭಾರತ ಸರಕಾರ ನಿರ್ಧರಿಸಿದೆ.

ನವದೆಹಲಿ ನ 26....ದೆಲ್ಲಿ ಪ್ರಾಂತ್ಯದಲ್ಲಿ ಪತ್ರಿಕೆಗಳ ಮೇಲೆ ಕೊಂಮುವಾರು ಗಲಭೆ ಸಂಬಂಧದ ವಾರ್ತೆಗಳ ಮೇಲೆ ಪ್ರೀಸೆನ್ಸ್ಶಾರ್ ಏರ್ಪಡಿಸಲಾಗಿದೆ.

ನವದೆಹಲಿ ನ 26.... ಸಕ್ಕರೆ ಮೇಲಿನ ಕಂಟ್ರೋಲು ತೆಗೆಯಲ್ಪಡುವದೆಂದು ನಿರ್ಧಾರವಾಗಿದೆ

ಫಂಡರಾಪುರ ನ 27 .... ಫಂಡರಾಪುರದ ವಿಠೋಬ ದೇವಾಲಯಕ್ಕೆ ಹರಿಜನ ಪ್ರವೇಶವಾಯಿತು.

ಮೈಸೂರು ನ 27.... ವನಿತಾ ಸದನದ ಆಶ್ರಯದಲ್ಲಿ ಏರ್ಪಡಿಸಿದ್ದ ಮಕ್ಕಳ ಪುಸ್ತಕ ಪ್ರದರ್ಶನದ ಪ್ರಾರಂಭೋತ್ಸವವನ್ನು ಮಂತ್ರಿ ಶ್ರೀ ಚಂದ್ರಶೇಖರಯ್ಯನವರು ಅಧ್ಯಕ್ಷತೆಯಲ್ಲಿ ನೆರವೇರಿತು

ಹಾಸನ .... ಜಿಲ್ಲೆಯ ಇಂಟರ್ಮೀಡಿಯೆಟ್ ಕಾಲೇಜಿನ ಉಪಾಧ್ಯಾಯರೊಬ್ಬರಿಂದ ವರ್ಕಸಿ ಖಂಡಿಸಲು ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆ.

ಹೊಸದೆಲ್ಲಿ ನ 26....ಭಾಷಾವಾರು ಪ್ರಾಂತ್ಯ ನಿರ್ಮಾಣದ ಬಗ್ಗೆ ಪಂ ॥ ನೆಹರು, ಆಂಧ್ರ ಪ್ರಾಂತ್ಯ ನಿರ್ಮಾಣಕ್ಕೆ ತೊಂದರೆಯಿಲ್ಲವೆಂದೂ, ಕರ್ನಾಟಕ ಮಹಾರಾಷ್ಟ್ರ ಪ್ರಾಂತ್ಯ ನಿರ್ಮಾಣಕ್ಕೆ ಹಿಂದೆಗೆದು ಮರ್ಜಿಕೊಂಡೂ ಹೇಳಿದರು

ವಿಮಾನ ಪ್ರಮಾದ

ಆಲಪ್ಪು ಪರ್ವತಗಳ ಮೇಲೆ ಡೆಕೋಟಾ ವಿಮಾನವು ಕಳೆದ ಸಂಬರಿನಲ್ಲಿ ಬಿದ್ದುಹೋಯಿತು. ವಿಮಾನ ಪ್ರಮಾದದ ಆಧಾರದಮೇಲೆ 'ರಿಸ್ಕ್ಯೂ' ಎಂಬ ಫಿಲಂ ತಯಾರಾಗುತ್ತಿದೆ. ಮಂಜಿನ ಪರ್ವತಗಳನ್ನು ಸ್ಟೂಡಿಯೋದಲ್ಲಿಯೇ ತಯಾರ್ಮಾಡಿದ್ದಾರೆ. 300 ಟನ್ ಸೈಂಧವ ಲವಣವನ್ನು ನಾಫ್ತಲೈನಿನೊಂದಿಗೆ ಕಲಿಸಿ ತಳಿತಳ ಮೆರೆಯುವ ಮಂಜಿನ ಪರ್ವತಗಳನ್ನು ತಯಾರಿಸಿರುವರು ಆದರೊಳಗೆ ಮೊಣಕಾಲು ಆಳವಾದ ಮಂಜಿನ ಪ್ರವಾಹವು ಕೂಡ ಕಲ್ಪಿಸಲ್ಪಟ್ಟಿದೆ. ಫಿಲಂ ನೋಡುವಂಥವರಿಗೆ ನಿಜವಾಗಿ ಆಲಪ್ಪು ಪರ್ವತಗಳ ಮೇಲೆಯೇ ವಿಮಾನವು ಬಿದ್ದಂತೆ ಕಾಣಬರುತ್ತವೆ.

ಂ ಂ

ಮುದುಕಿ ಮದುವೆ

ಲಂಡನ್.... 72 ವರ್ಷದ ಮುದುಕಿ ಮಿಸ್ ರೋಸ್ ಲೀ ಕೋರ್ಟಿನಲ್ಲಿ ಇತ್ತ ಹೇಳಿಕೆ ಪ್ರಕಾರ ಆಕೆಯು ಮದುವೆಗೊತ್ತಾಗಿ 40 ವರ್ಷಗಳಾಗಿತ್ತು, ಆದರೆ ಮದುವೆಯೇನೂ ಆಗಿಲ್ಲ. ಆಕೆಯ ಭಾವೀ ಪತಿಯು ಸೈಕಾ ಸೈನ್ಯಾಧಿಕಾರಿಯಾಗಿದ್ದುದರಿಂದ ಹೆಚ್ಚು ಕಾಲವನ್ನು ವಿದೇಶದಲ್ಲಿ ಕಳೆದುದರಿಂದ ಬೇಗನೆ ಮದುವೆಯಾಗಲು ಸಾಧ್ಯವಾಗಲಿಲ್ಲವಂತೆ. ಈ ಕ್ರಿಸ್ಮಸ್ಸಿಗೆ ಮದುವೆಯಾಗಲಿರುವುದರಿಂದ ತನ್ನ ಮನೆಯ ಕೆಳ ಭಾಗವನ್ನು ಬಾಡಿಗೆದಾರರು ಬಿಟ್ಟುಕೊಡಬೇಕೆಂದು ಆಕೆ ಕೋರ್ಟಿನಲ್ಲಿ ಅರ್ಜಿ ಹಾಕಿದಳು. ನ್ಯಾಯಾಧೀಶರು ನೂರು ತಿಂಗಳೊಳಗಾಗಿ ಮನೆ ಖಾಲಿ ಮಾಡಿಕೊಡುವಂತೆ ಬಾಡಿಗೆದಾರರಿಗೆ ತಿಳಿಸಿರುವರಂತೆ!

ಪಾಕಿಸ್ತಾನ ವಿಚಾರ

ಅಲ್ಲಿಂದ ಬಂದಿರುವ ಹಿಂದೂಗಳಿಂದ ತಿಳಿದುಬಂದಿರುವ ವಿಚಾರ—

ಪಾಕಿಸ್ತಾನದಲ್ಲಿ ಸರ್ಕಾರದ ವಿಲೆಟರಿ ಮತ್ತು ಪೋಲೀಸು ವ್ಯವಸ್ಥೆಯು ಎಲ್ಲಿ ಸಾಕಾದಷ್ಟು ಇದೆಯೋ ಅಲ್ಲಿ ಯಾವ ಬಗೆಯ ಗಲಭೆಯೂ ಇರುವುದಿಲ್ಲ. ಮಿಕ್ಕ ಪ್ರದೇಶಗಳಲ್ಲಿ ಗೂಂಡಾಗಳ ರಾಜ್ಯದಲ್ಲಿ ಜನರು ಕಷ್ಟಗಳಪಾಲಾಗುತ್ತಿರುವರು. ಅಲ್ಲಿಂದ ಹೊರಗೆ ಬರುತ್ತಿರುವ ಹಿಂದೂಗಳ ಸಾಮಾನುಗಳನ್ನು ಪರೀಕ್ಷಿಸುವಾಗಲಿ ಆ ಉದ್ಯೋಗಿಗಳಿಗೆ ಕೈ ಬಿಚ್ಚಿಗೆ ಮಾಡಿದಲ್ಲಿ ಯಾವ ಪದಾರ್ಥಗಳನ್ನು ತರುವುದಕ್ಕೂ ಕಷ್ಟವಿರುವುದಿಲ್ಲ. ಈಗ 2—3 ತಿಂಗಳುಗಳ ಹಿಂದೆ ಪಾಕಿಸ್ತಾನದ ಹೀರಾಸಿಕ್ಕರಿಗೆ ಆಗುತ್ತಿದ್ದಷ್ಟು ಕಷ್ಟವು ಈಗಿಲ್ಲ. ಪಾಕಿಸ್ತಾನದಲ್ಲಿ ಗೊಂಡಾಗ್ಸ್ ಹತೋಟಿಗೆ ತರುವದು ಕಷ್ಟವಾಗಿರುವುದರಿಂದ ಅಲ್ಪಸಂಖ್ಯಾತಂತದ ಹಿಂದೂ ಸಿಕ್ಕರು ಕಷ್ಟಗಳ ಪಾಲಾಗುತ್ತಿದ್ದಾರೆ.

ಂ ಂ

ಪಶುಗಳ ಸಂತೆ

ಅಷ್ಟಿರ್ಗನಿನ ಪಶುಗಳ ಸಂತೆಗೆ ಎಲ್ಲಾ ದೇಶಗತಿಂದಲೂ ಪಶುಗಳು ಬಂದಿದ್ದವು. ಫ್ರೆನ್ಸ್ ಆಫ್ ಮೆಯಿಡಿ ಎಂಬ ಕೋಣವು 5800 ಗಿನಿಗಳಿಗೆ ಮಾರಲ್ಪಟ್ಟಿತು.

ಲಂಡನ್ನಿನ ಹೈಡು ಪಾರ್ಕ್ ಮೂಲಕವಾಗಿ ದಿನಬೆಂಡಕ್ಕೆ ಎಪ್ಪತ್ತೆಂಟು ಸಾವಿರ ಮೋಟಾರು ಗಾಡಿಗಳು ಹೋಗುತ್ತಿರುತ್ತವೆ.



ಐ ವಲ್ ಓ ಸಮ್ಮೇಳನದಲ್ಲಿ ಪಂ ॥ ನೆಹರು

ಸ ಮಾ ನ ತ್ವ

ದೊಡ್ಡ ವಿಮಾನೊಂದು ಸಣ್ಣ ವಿಮಾನೊಂದನ್ನು ಹೇಗಾದರೂ ನುಂಗಿಹಾಕಬೇಕೆಂಬ ಉದ್ದೇಶದಿಂದ ಅದನ್ನು ಹಿಡಿದುಕೊಂಡಿತು.

ಸಣ್ಣ ವಿಮಾನು ಕೀಚು ಧ್ವನಿಯಿಂದ ಇದು ಅನ್ಯಾಯ, ಇದು ಅನ್ಯಾಯ, ನನಗೂ ಪ್ರಾಣವೆಂದರೆ ಇಷ್ಟವೇ. ಶಾಸನ ದೃಷ್ಟಿಯಲ್ಲಿ ಎಲ್ಲಾ ವಿಮಾನುಗಳೂ ಒಂದೇ ಎಂದು ಹೇಳಿತು.

ಆಗ ದೊಡ್ಡ ವಿಮಾನು 'ಪರವಾಇಲ್ಲ, ನಾವು ಸಮಾನರೇ ಅಲ್ಲವೇ ಎಂಬ ಮಾತು ಈಗ ಬೇಡ, ನಾನು ನಿನ್ನನ್ನು ನುಂಗಕೂಡದೆಂದು ಹೇಳುತ್ತಿರುವಿಯಷ್ಟೆ ಸರಿಯೇ. ಆದರೆ ನಿನ್ನ ಕೈಲಾದಲ್ಲಿ ನನ್ನನ್ನು ನುಂಗು, ನುಂಗಿ ಹಾಕು, ಭಯಪಡಬೇಡ ನಾನು ನಿನ್ನೊಂದಿಗೆ ಹೋರಾಡುವುದಿಲ್ಲ' ಎಂದು ಉತ್ತರವನ್ನಿತ್ತಿತು.

ಸಣ್ಣ ವಿಮಾನು ಬಾಯಿ ತೆರೆದು ದೊಡ್ಡ ವಿಮಾನನ್ನು ಕಬಳಿಸಲು ವಿಶ್ವಪ್ರಯತ್ನ ಮಾಡಿತು. ಕೊನೆಗೆ ನಿಟ್ಟುಸಿರನ್ನು ಬಿಡುತ್ತಾ 'ಗೆದ್ದೆ, ಇನ್ನು ನನ್ನನ್ನು ನುಂಗಿಬಿಡು' ಎಂದುಹೇಳಿಬಿಟ್ಟಿತು?

(ಫೆಡರ್ ಫೋಲೋ ಗಬ್)

[ಸಮಾನತ್ವವು ಭಾವನೆಯಲ್ಲಿಂಬೇಕಾಗಲಿ ಕ್ರಿಯೆಯಲ್ಲಿ ಅಲ್ಲ. ನ್ಯಾಪಹಾರದಲ್ಲಿ ಸಮಾನತ್ವವು ಸಾಧ್ಯವಲ್ಲದವಾಗು. —ಸಂ]

ವು ಡ್ ಲ್ಯಾ ಂ ಡ್ಸ್

28—11—47 ರಿಂದ

ಮಾ ಯಾ ದೇ ವಿ

ರ ಮೇ ಶ್

ಡಬ್ಲ್ಯೂ. ಎಂ. ಖಾನ್

ಅ ನ್ವಾ ರ್

— ಪಾತ್ರವಹಿಸಿರುವ —

ರಾ ನ್ತ

(ಅಮೋಘ ಹಿಂದಿ ಚಿತ್ರ)

ಪ್ರತಿ ದಿನ 3 ಆಟಗಳು

Edited, Printed and Publishd by M S Krishna Rao at the Satyavadi Press Chamaraja Agahar Mysore.

Woodlands

Morning Shows at 10-30
From 28—11—47 For 4 days

Atlantic Ferry

— starring —

Veleric Hobson

Michael Redgrave

At Opera From 20—11—47

ಮೂಲಚಿತ್ರ — ಶಿವಭಾಗ್ಯಂ

ಎಸ್. ಎ. ಸುಬ್ಬಯ್ಯ — ನಂಬಿಯಾರ್

ಪಾತ್ರವಹಿಸಿರುವ

ಕ ಂ ಜ ನ್

ತಮಿಳು ಚಿತ್ರ — ಇದರ ಜೊತೆಯಲ್ಲಿ ಕೊಯಮತ್ತೂರಿನಲ್ಲಿ ಸ್ವತಂತ್ರ ದಿನಾಚರಣೆ ಮತ್ತು ಮಹಾತ್ಮಾ ಗಾಂಧಿಯವರಸಳನ ಯಾತ್ರೆ ಫಿಲಿಂ ಸಹಾ ತೋರಿಸಲಾಗುತ್ತೆ.

Morning Shows from 28-11-47

Madame Pimpernal

ಸ ತ್ಯ ವಾ ದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪಂಸ್ಥಳಕ್ಕೆ

ಅಂಚೆವೆಚ್ಚ ಸೇರಿ ರೂ. 9.

ಸೋಮವಾರಸಂಚಿಕೆ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1—12—0

ಮೈಸೂರು ಸಿಟಿ ರೇಷನಿಂಗ್

No. R 6 - 81 / 47

1947 ನೇ ಇಸವಿ ನವೆಂಬರ್ ನಾಹ 30 ನೇ ತಾರೀಖಿನ ದಿನಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೊ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೊ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಎಂ. ಶ್ರೀನಿವಾಸಲು ನಾಯ್ಡು
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

22—11—47

Save the Cow

ಗೋ ವಧೆ ನಿಲ್ಲಲಿ

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ಸಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ

ಎಲ್ಲಾ ಪ್ರಮುಖ ಔಷಧವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.,
Malleswaram P. O. Bangalore

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಫ್ಲನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಉಪಯೋಗಿಸುವುದಕ್ಕೂ ಅತ್ಯಂತ ಶ್ರೇಷ್ಠವಾದ ಕೇಸರಿ ಎಂದು ಶಿಫಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್ ಪಾಲ್

(ಹಿಂಗು, ಕೇಸರಿ ಮತ್ತು ಕೆರಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

SHAKTI SUDHA

A Superb TONIC